2	2000-2001	ಸಿಂದಗಿ ಹಂತ-1	50
3	2001-2002	ಮುದ್ದೋಳ ಪಟ್ಟಣ	50
		ಸೌದತ್ತಿ	50
		ಸಿಂದಗಿ ಹಂತ-2	50
		ಒಟ್ಟು	150

ರಾಜೀವ್‌ಗಾಂಧಿ ವಸತಿ ಯೋಜನೆ

940 (1304) ಶ್ರೀ ಡಾ।। ಬಾರತೀ ಶಂಕರ್ (ಟಿ. ನರಸೀಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಸತಿ ಯೋಜನೆಯಲ್ಲಿ ಕಳೆದ 3 ವರ್ಷಗಳಲ್ಲಿ ಸರ್ಕಾರವು ಎಷ್ಟು ಮನೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಇಟ್ಟುಕೊಂಡಿದೆ;

ಆ) ಈವರೆಗೆ ಸಾಧಿಸಿರುವ ಗುರಿಯೇನು;

ಇ) ಮನೆಯೊಂದಕ್ಕೆ ಒದಗಿಸುವ ಹಣ ಇಂದಿನ ಸಾಮಗ್ರಿಗಳ ಬೆಲೆಗೆ ಅನುಗುಣವಾಗಿದೆಯೇ;

ಈ) ನವಗ್ರಾಮ ಯೋಜನೆಯಲ್ಲಿ ಗುರಿ ಸಾಧಿಸಿದ ಕ್ಷೇತ್ರಗಳಿಗೆ ಈ ಸಾಲಿನಲ್ಲಿ ಹೆಚ್ಚುವರಿ ಮನೆಗಳನ್ನು ಒದಗಿಸಲಾಗುವುದೇ?

ಶ್ರೀ ಸಗೀರ್ ಅಹಮದ್ (ವಸತಿ ಸಚಿವರು) :

ಅ) 2000-01 ರಿಂದ 2001-02 ರ ವರೆಗೆ 4,10,732 ಮನೆಗಳು

ಆ) 2000-01 ರಿಂದ 2002-03 ರಲ್ಲಿ 31-01-2003 ರವರೆಗೆ 4,55,731 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಇದರಲ್ಲಿ ಹಿಂದಿನ ಶ್ರೇಣಿಯಲ್ಲಿ ಮಂಜೂರಾದ ಮನೆಗಳ ನಿರ್ಮಾಣ ಕೂಡ ಸೇರಿರುತ್ತದೆ.

ಇ) ಹೌದು

ಈ) ಇಲ್ಲ

ನಾಗಮಂಗಲ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿ ವಸತಿ ಕಲ್ಪಿಸುವುದು

941 (1583) ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಆದೇಶದಂತೆ ವಸತಿಹೀನರಿಗೆ ವಸತಿ ಕಲ್ಪಿಸಿಕೊಟ್ಟು ಅವರನ್ನು ಆಶ್ರಯ ಯೋಜನೆಯ ಅಡಿಯಲ್ಲಿ ಆಯ್ಕೆ ಮಾಡಲು ನಿರ್ದೇಶನ ಮಾಡಿರುವುದು ನಿಜವೇ; ಆದರಂತೆ ನಾಗಮಂಗಲ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಅರ್ಹ ಫಲಾನು ಭವಿಗಳನ್ನು ಆಯ್ಕೆ ಮಾಡಿ ಫಲಾನುಭವಿಗಳಿಗೆ ವಸತಿ ಹಂಚುವ ಸಂದರ್ಭದಲ್ಲಿ ಸರ್ಕಾರ ತಡೆ ಆಜ್ಞೆ ನೀಡಿರುವುದು ನಿಜವೇ; ಹಾಗಿಲ್ಲದಿದ್ದಲ್ಲಿ, ತಡೆಯಾಜ್ಞೆಯನ್ನು ತೆರವುಗೊಳಿಸಿ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಆಶ್ರಯ ವಸತಿ ಯೋಜನೆಯ ನಿಯಮಮಾನುಸಾರ ಆಶ್ರಯ ಸಮಿತಿಯು ಫಲಾನುಭವಿಗಳ ಆಯ್ಕೆ ಮಾಡಲು ನಿರ್ದೇಶನ ನೀಡಿರುವುದು ನಿಜ ನಾಗಮಂಗಲ ತಾಲ್ಲೂಕಿನ ಆಶ್ರಯ ಸಮಿತಿಯ ಸಭೆಯ ನಡವಳಿಗೆ ತಡೆಯಾಜ್ಞೆಯನ್ನು ನೀಡಿರುವುದಿಲ್ಲ. ಆದಕಾರಣ ತಡೆಯಾಜ್ಞೆಯನ್ನು ತೆರವುಗೊಳಿಸುವುದು ಉದ್ಭವಿಸುವುದಿಲ್ಲ.